ಕರಿಮುಖದ ಗಣಪತಿಯ ಚರಣಕೆ ವಂದನೆ ಮಾಡಿ ।
ಶಾರದೆಗೆ ಶಿರಬಾಗಿ ಬೇಡಿಕೊಂಬುವೆ ನಾನು ।
ಒಲಿದೆನಗೆ ವರವ ಕೊಡು ಎನುತ ।। ೧ ।।

ಅಜಭವ ನಾರದ ಸುಜನರೊಂದಿತ ದೇವ ।
ಮುದದಿ ಮುದ್ದು ಮಹಾಲಕ್ಷ್ಮೀ ನಾರಾಯಣಾಂ ।
ಭುಜಪಾದಕೆರಗಿ ನಮೋ ಎಂದೆ ।। ೨ ।।

ಇರುತಿದ್ದ ಬಡವ ಬ್ರಾಹ್ಮಣನೊಂದು ಪಟ್ಟಣದಿ ।
ಮಡದಿ ಮಕ್ಕಳು ನಾಲ್ಕು ಮಂದಿ ಸುತರು
ಸಖಿಯರೊಡಗೊಂಡು ಸುಖದಿಂದ ।। ೩ ।।

ಒಬ್ಬೊಬ್ಬ ಸುತಗೆ ಇಬ್ಬಿಬ್ಬರು ಗಂಡು ಮಕ್ಕಳು ।
ವಿದ್ಯುಕ್ತದಿಂದ ಚಂಡಿಕುಪನಯನ ।
ಶುದ್ಧಾತ್ಮರಾಗಿರುತಿಹರು ।। ೪ ।।

ಪ್ರಾತಃಕಾಲದಲೆದ್ದು ನಾಲ್ಕು ಮಂದಿ ಸುತರು ।
ಗೋಪಾಳ ಜೋಳ ನಾಲ್ಕು ಸೇರು ಕಾಳು ।
ತಂದ್ಹಾಕುವರು ಅರ್ಧ ಗ್ರಾಸವನು ।। ೫ ।।

ಮೂರು ಪಾವು ಹಿಟ್ಟು ಮುಂಜಾನೆ ಇಟ್ಟು ।
ಮುಂದುಳಿದ ಗ್ರಾಸವನು ಬುತ್ತಿ ಅಂಬಲಿ
ಕಾಸಿಕೊಂಡು ಕಾಲ ಕಳೆಯುವರು ।। ೬ ।।

ಒಂದಾನೊಂದು ದಿನದಿ ಬಂದರಿಬ್ಬರು ದ್ವಿಜರು ।
ಮಂದಿರದಿ ದ್ವಾರದಲಿ ನಿಂತು ಕೂಗುತಿರೆ ।
ಬಂದಳೊಬ್ಬಳು ಹಿರಿಯ ಸೊಸೆ ತಾನು ।। ೭ ।।

ಆರು ಬಂದವರು ನಿಮ್ಮ ನಾಮ ವೇನೆಂದೆನಲು ।
ಬಾಗಿ ಶಿರವನು ಚರಣಕೆ ವಂದನೆ ಮಾಡಿ
ಬಹಳ ಭಕ್ತಿಯಲಿ ಕರೆದಳು ।। ೮ ।।

ದಾರಾದರೇನಮ್ಮ ಬಾಯಾರಿ ಬಳಲಿದೆವು ।
ಮೂರು ನಿರಹಾರ ಮಾಡಿ ಬಂದೆವು ನಮಗೆ ।
ಆಹಾರವ ಕೊಟ್ಟು ಕಳಿಸೆಂದರು ।। ೯ ।।

ಭಿಕ್ಷೆಗೆ ಹೋದವರು ಈ ಕ್ಷಣ ಬಂದವರು ।
ಅರೆಕ್ಷಣ ನೀವು ತಡೆದರೆ ಜೋಳದ ।
ಭಿಕ್ಷವನು ಮಾಡಿ ಬಡಿಸುವೆನು ।। ೧೦ ।।

ಹೊತ್ತು ಬಹಳಾಯಿತು ಹಸಿದ ನಮ್ಮ ಹೊಟ್ಟೆಗೆ ।
ತುತ್ತನ್ನ ಕೊಟ್ಟರೆ ಅದನುಂಡು ನಾವೀಗ ।
ತೃಪ್ತರಾಗಿ ಹರಸಿ ನಡೆದೇವು ।। ೧೧ ।।

ಮಡಿ ಉಟ್ಟು ಮಾಡಿದಳು ಮುಂಜಿಮಣಿಗಳಿಗಡಿಗೆ ।
ತಡೆಯದೇ ನೀವು ಸ್ನಾನ ಮಾಡಿ ಬನ್ನಿರೆಂದು ।
ದೃಢ ಭಕ್ತಿಯಿಂದ ಕರೆದಳು ।। ೧೨ ।।

ಸ್ನಾನ ಸಂಧ್ಯಾವಂದನೆಯ ಮಾಡಿ ಬಂದೆವು ಎನಲು ।
ತಾನು ಎಡೆಮಾಡಿ ಎರಡು ಬಕ್ಕರಿಯ
ನೀಡಿದಳು ಬಹಳ ಹರುಷದಿ ।। ೧೩ ।।

ಬೆಲ್ಲ ಬೆಣ್ಣೆಯತುಪ್ಪ ಕರಣಿ ಕರಣಿ ಕೆನೆಮೊಸರು ।
ನುಣ್ಣನೆ ತೊವ್ವೆ ಅರೆದ ಕೊಬ್ಬರಿ ಕಾರ ।
ಉಣ್ಣಿರೆಂದು ಹಾಕುತ್ತಿದ್ದಳು ।। ೧೪ ।।

ಸಡಗರದಿ ಅದನುಂಡು ಕುಡಿದು ಮೇಲ್ಮಜ್ಜಿಗೆಯ ।
ಒಡೆದಡಿಕೆ ವೀಳ್ಯವ ಕೊಟ್ಟು ನಿಮ್ಮ ।
ನಡೆವ ಹೆಸರು ಹೇಳಬೇಕೆಂದಳು ।।೧೫ ।।

ಇಂದುಸುತನು, ಸುರರಗುರುವು ।
ಎಂದು ಪೇಳುವರು ಎಮಗೆ । ಬಂದೆವು ನಾವು ಬುಧ
ಬೃಹಸ್ಪತಿಗಳು । ಆನಂದವಾಯಿತು ನಮಗಿಂದು ।। ೧೬ ।।

ಅನ್ನ ಬೇಕಾದರೆ ಅಡುಗೆ ಒಲೆಯ ಗೋಡೆಯಲಿ ।
ನಮ್ಮನ್ನು ಬರೆದು ಪೂಜೆ ಮಾಡಿದರೆ
ಅನ್ನವನು ಕರೆದು ನಾವು ಕೊಡುವೆವು ।। ೧೭ ।।

ಭಾಗ್ಯ ಬೇಕಾದರೆ ಬರೆದು ಪೆಟ್ಟಿಗೆಯಲಿ ।
ಬಹಳ ಭಕ್ತಿಯಿಂದ ಪೂಜೆ ಮಾಡಿದರೆ ಬಾಗ್ಯ
ಕೊಡುವೆವೆಂದು ಹೇಳಿ ನಡೆದರಾಗ ।। ೧೮ ।।

ಸುಣ್ಣ ಸಾರಣೆ ಮಾಡಿ ಬಣ್ಣ ಚಿತ್ರವ ಬರೆದು ।
ಚೆನ್ನಾಗಿ ಬರೆದು ಬುಧ-ಬೃಹಸ್ಪತಿಗಳನ್ನು ।
ಮನ್ನಿಸಿ ಪೂಜೆಯ ಮಾಡಿದರು ।। ೧೯ ।।

ಹಚ್ಚಿಟ್ಟು ದೀಪ ಗಂಧಾಕ್ಷತೆಯ ಫಲ ಪುಷ್ಪ ।
ಉತ್ರಾಣಿ ಅಕ್ಕಿ ಮಂತ್ರಾಕ್ಷತೆ ಮಾಡಿ ।
ಭಕ್ತಿಲೆ ಪೂಜೆಯನು ಮಾಡಿದರು ।। ೨೦ ।।

ಗೋಪಾಳಕ್ಕೋದಲ್ಲಿ ಗೋಧಿ ಬೇಳೆ ಅಕ್ಕಿ ।
ಹಾಕುವರು ತಂದು ನಾಲ್ಕು ಬೀದಿಯಲಿ ಗಂಟು।
ತಾವು ಇಟ್ಟು ಹೊತ್ತಾರು ಹೆಗಲಲ್ಲಿ ।। ೨೧ ।।

ಹಿಡಿ ಜೋಳ ಬೇಡಿದರೆ ಪಡಿ ಜೋಳ ಹಾಕುವರು ।
ಬಡವರು ನೀವು ಬನ್ನಿರೆಂದು ಕರೆದು ।
ಹಿಡಿ ಹಿಡಿ ರೊಕ್ಕ ಕೊಡುವರು ।। ೨೨ ।।

ಭರದಿಂದ ಬಂದಾಗ ಸುರುವಿದರು ಧಾನ್ಯವನು ।
ಬರೆದಂಥ ಗೊಂಬೆಯನು ಕೇಳಿದರದರ
ವಿವರವನು ಹೇಳಬೇಕೆಂದು ।। ೨೩ ।।

ಇವರು ಬುಧ-ಬೃಹಸ್ಪತಿಯೆಂಬ ದೇವತೆಗಳು ।
ಇವರು ಬಂದೆಮ್ಮ ಮನೆಯ ಊಟವನುಂಡು ।
ಒಲಿದು ವರವ ಕೊಟ್ಟು ನಡೆದರು ।। ೨೪ ।।

ಬಹಳ ಅನ್ನವ ಮಾಡು ಜೋಳದ ಬಕ್ಕರಿ ಮಾಡು ।
ಬೇಳೆಯ ತೊವ್ವೆ ಬೆಲ್ಲ ಜಿಣ್ಣಿಯ ತುಪ್ಪ
ಎಲ್ಲ ನೈವೇದ್ಯಕೆ ಇಡಿರೆಂದು ।। ೨೫ ।।

ದಿನದಿನಕೆ ಧನ ಧಾನ್ಯ ಘನವಾಗಿ ಬರುವದು ।
ಮನೆಯಲ್ಲಿ ಸುಖವು ಮನಕೆ ಬಂದ ದೇಶ ।
ನೋಡಿ ಬರುವೆನೆಂದನು।। ೨೬ ।।

ಅರೆಹೊಟ್ಟೆ ದಾರಿದ್ರ್ಯ ಹಿಂದಾಯಿತು ।
ಸರ್ವ ರಾಜ್ಯವನು ನೋಡಿ ಬರುವೆನೆಂದು ।
ಹೊರಟನೊಬ್ಬ ಹಿರಿಯ ಮಗ ತಾನು ।। ೨೭ ।।

ಚಂದ್ರಾವತಿಯಲಿ ಚಂದ್ರಶೇಖರನೆಂಬ ರಾಜನು ।
ಅಂದು ಸ್ವರ್ಗಸ್ಥನಾಗಿರಲು ರಾಜ್ಯಕ್ಕೆ ।
ಮುಂದೊಬ್ಬ ಅರಸನು ಬರಲೆಂದು ।। ೨೮ ।।

ಆನೆಯ ಕರದಲಿ ವನಮಾಲೆಯ ಕೊಟ್ಟರಾಗ ।
ತಾನು ಓಡುತ ಹೋಗಿ ಆ ದ್ವಿಜನ ಕೊರಳಲಿ ।
ಹಾಕಿತು ಬಹಳ ಹರಿಷದಲಿ ।। ೨೯ ।।

ಬಡವ ಬ್ರಾಹ್ಮಣ ಇಂಥ ಪೊಡವಿಪಾಲಕತನವ ।
ಕೊಡಲಾಗದು ನಡೆ ನಡೆ ನಡೆಯೆಂದು ।
ದೂಡಿದರು ಊರ ಹೊರಗಾಗ ।। ೩೦ ।।

ಮತ್ತೊಮ್ಮೆ ಮಾಲೆಯ ಕೊಟ್ಟರೋಡುತ ದ್ವಿಜನ ।
ಕುತ್ತಿಗೆಯಲಿ ಹಾಕಿ ತನ್ನ ಸೊಂಡೆಯಿಂದ
ಎತ್ತಿಕೊಂಡೊಯ್ತು ಆ ಗಜವು ।। ೩೧ ।।

ಲಕ್ಷ್ಮೀ ಒಲಿದವರಿಗೆ ಅಲಕ್ಷ ಮಾಡುವದೇನು ।
ಸಾಕ್ಷಾತ್ ದೊರೆಯು ಈತನೆಂದು ಹೊಗಳುತ ।
ಕಟ್ಟಿದರು ಪಟ್ಟವನು ಬೇಗ ।। ೩೨ ।।

ಮತ್ತವರ ಮಂದಿರಕೆ ಬಂದರು ಬುಧ_ಬೃಹಸ್ಪತಿಗಳು ।
ಸ್ವಸ್ಥವೇ ಕ್ಷೇಮವೇ ಎಂಬಂತೆ ವಾರ್ತೆಯನು ।
ಕೇಳಿದರು ಕರುಣದಿಂದಾಗ ।। ೩೩ ।।

ಬಂದೀರಿ ದಯಮಾಡಿ ಉಂಡು ಹೋಗಿ ಎನುತ ।
ಮಂಡಿಗೆ ಫೇಣಿ ಮಾಡುವುದಕೆಮರಗೋಧಿ ।
ತಂದಳು ಸಕಲ ಸಾಹಿತ್ಯ ।। ೩೪ ।।

ನಮಗೇನು ಬೇಡಮ್ಮ ನೌಲಿ ಪಾಕದ ಭಕ್ಷ್ಯ ।
ನವನೀತ ಶಾಕ ಶಂಕರಗಂಡನ ಅಡಿಗೆ ।
ಸವಿಯಾಗಿ ಮಾಡಿ ಬಡಿಸೆಂದರು ।। ೩೫ ।।

ಜೋಡಿಸಿ ಮಣೆಯ ಹಾಕಿ ಜ್ಯೋತಿಗಳ ಹಚ್ಚಿಟ್ಟು ।
ಕೂಡ್ರಿಸಿದಳಾಗ ಕುಡಿ ಬಾಳೆ ಎಲೆ ಹಾಕಿ
ಮಾಡಿದಡಿಗೆಯ ಬಡಿಸೆ ಭಕ್ತಿಯಲಿ ।। ೩೬ ।।

ಉಂಡು ಕೈ ತೊಳೆದು ವೀಳ್ಯ ತಕ್ಕೊಂಡು ।
ಸಂಭ್ರಮದಿ ಸಾಮ್ರಾಜ್ಯವನಾಳಿರೆಂದು ।
ಒಲಿದು ವರವ ಕೊಟ್ಟು ನಡೆದರು ।। ೩೭ ।।

ಒಂದು ದಿನ ಮಕ್ಕಳು ಬಂದು ಕೋಪದಿ ಬರೆದ ।
ಗೊಂಬೆಯನು ಅಳಿಸಿ ಅಡಿಗೆಯನು ।
ಎಳೆತಂದು ಉಂಡು ನೈವೇದ್ಯಕ್ಕೆ ಇಡದೆ ಹಾಗೆ ।। ೩೮ ।।

ಅಂದಿನಿಂದಲಿ ಬಂದಿತು ದಾರಿದ್ರ್ಯ ।
ಒಂದು ಸೆರೆ ಕಾಳು ಹುಟ್ಟದಂತಾಯಿತು ।
ಮುಂದೇನು ಎಮಗೆ ಗತಿಯೆಂದರು ।। ೩೯ ।।

ಊರು ಬಿಟ್ಟು ಪರ ಊರಿಗೆ ಹೋದಲ್ಲಿ ।
ಆರು ತಿಳಿಯುವರು ನಮ್ಮನು ಕಟ್ಟಿಗೆ ।
ಮಾರಿ ಕಾಲವನು ಕಳೆಯೋಣ ।। ೪೦ ।।

ಊರೂರು ತಿರುಗುತಲಿ ಮೀರಿತು ಹನ್ನೆರಡು ವರುಷ ।
ಮಾರುತಲಿ ಹೋಗಿ ಮಗನು ದೊರೆಯು ಆದಂಥ ।
ಶಹರಕ್ಕೆ ಹೋಗಿ ಸೇರಿದರು ।। ೪೧ ।।

ಗುಡ್ಡ ಗುಡ್ಡವ ತಿರುಗಿ ದೊಡ್ಡ ಹೊರೆಗಳ ಹೊತ್ತು ।
ದಡ್ಡಿ ಬಿದ್ದವು ನಮ್ಮ ಉದರಕ್ಕೆ ।
ದುಡ್ಡುಗಳು ದೊರೆಯವೆಂದೆನುತ ।। ೪೨ ।।

ಅರಸಿನ ಮನೆಯಲ್ಲಿ ಅರೆಸುತಿದ್ದರು ಗಚ್ಚು ।
ಧರಿಸಿ ಕಟ್ಟಿಗೆಯ ದಣಿಯಲಾರದೆ ಗಚ್ಚು ।
ಅರೆಯುವ ಕೆಲಸಕ್ಕೆ ಹೊಂದಿದರು ।। ೪೩ ।।

ಒಂದು ದಿನ ಆ ರಾಜ ಬಂದು ಬಾಜಾರಕೆ ।
ತಾಯಿ ತಂದೆ ಅಣ್ಣ ತಮ್ಮಂದಿರ ಹೆಂಡರು ತನ್ನ
ಸತಿ ಸುತರ ನೋಡಿ ಹರುಷದಲಿ ।। ೪೪ ।।

ದೊರೆ ತಾನು ತಮ್ಮವರ ಗುರುತು ತಿಳಿದಾಕ್ಷಣದಿ ।
ಅರಿತುಕೋ ಇವರ ವರ್ತಮಾನವೆಂದು
ಕಳಿಸಿದನು ಮಂತ್ರಿಯನು ಬೇಗ ।। ೪೫ ।।

ದಾವ ದೇಶವು ನಿಮ್ಮ ನಾಮವೇನೆಂದೆನಲು ।
ಹೇಳಿದರು ತಮ್ಮ ಸಕಲ ವೃತ್ತಾಂತವನು ।
ಕೇಳಿ ಸಂತಾಪದಿಂದಾಗಿ ।। ೪೬ ।।

ಹಿರಿಯ ಮಗ ದೊರೆಯಾಗಿ ಇರುವ ಈ ಊರಲ್ಲಿ ।
ಪರಮ ಪುಣ್ಯ ಭಾಗ್ಯಶಾಲಿಗಳೆಂದು ।
ಅರುಹಿದನು ಅವರಿಗೆ ವಾರ್ತೆಯನು ।। ೪೭ ।।

ಮಗನ ವಾರ್ತೆಯನು ಕೇಳಿ ಮನದಲಿ ಹಿಗ್ಗುತಲಾಗ ।
ಜನನಿ ಜನಕ ತಂಮ್ಮಂದಿರು ಹೆಂಡಿರು  ತನ್ನ ।
ಸತಿ ಸುತರು ಕೇಳಿ ಹರುಷದಲಿ ।। ೪೮ ।।

ಬಹಳ ಸಾಮುದ್ರಿಕೆ ಬಲ್ಲ ಸಿದ್ಧಾಂತಿಗಳ ।
ಕೇಳಿದನು ಕರೆಸಿ ಮೀರಿತು ಹನ್ನೆರಡು ವರುಷ ।
ಮಾರಿ ಭೆಟ್ಟಿಯಾಗಲು ಹೇಗೆ ।। ೪೯ ।।

ಕೊಪ್ಪರಿಗೆ ತೈಲವನು ತುಂಬಿಟ್ಟು ದೇವಾಲಯದಿ ।
ಸುತ್ತ ನಿಂತು ನಿನ್ನ ಮುಖವ ನೋಡಿದರೆ
ಅದಕೆ ಮತ್ತೇನು ದೋಷವಿಲ್ಲವೆಂದರು ।। ೫೦ ।।

ಊರು ಶೃಂಗರಿಸಿ ಬೀದಿ ತೋರಣ ಕಟ್ಟಿ ।
ಸಾಧು ಶ್ರೀಗಂಧ ಪರಿಮಳದ ಥಳಿಯನು ಕೊಟ್ಟು
ಭೇರಿ ನಗಾರಿ ಹೊಯಿಸುತಲಿ ।। ೫೧ ।।

ತೇಜಿ ಗಜಪಲ್ಲಕ್ಕಿ ಕಾಜಿನಂದದಿ ರಥವು ।
ಬಾಜಾರದೊಳಗೆ ಬಾಜ ಭಜಂತ್ರಿಯ ।
ಊದುವ  ಕಾಳಿ ಕಡಿಮೆಯಿಲ್ಲ ।। ೫೨ ।।

ಎರಿಸಿ ಎಲ್ಲರಿಗೆ ವಸ್ತ್ರವ ಉಡಿಸಿ ದಿವ್ಯಾಂಬರವ ।
ಕಳಿಸಿದನು ಮುತ್ತು ಮಾಣಿಕ್ಯದಾಭರಣ
ಇಡಿಸಿ ಹೂಮಾಲೆ ಮುಡಿಸುತಲಿ ।। ೫೩ ।।

ಹಿಡಿಮುಡಿ ಹಾಸುತಲಿ ಹಿಡಿದರು ಛತ್ತರಿಗೆ ।
ಹಿಡಿ ಹಿಡಿ ಕೊಡುತ ಹೊನ್ನು ಬ್ರಾಹ್ಮಣರಿಗೆಲ್ಲ
ಸಡಗರದಿ ನಡೆದು ಗುಡಿಗೆ ಆಗ ।। ೫೪ ।।

ಎಣ್ಣೆಯೊಳು ಬಗ್ಗಿ ಎಲ್ಲರೂ ಮುಖ ನೋಡಿ ।
ಅಣ್ಣ ತಮ್ಮಂದಿರು ಹೆಂಡಿರು ತನ್ನ ಸುತರು ।
ಮನ್ನಿಸಿದ ತಾಯಿ ತಂದೆಗಳ ।। ೫೫ ।।

ತುಪ್ಪದ ದೀವಿಗೆಯು ಕರ್ಪೂರದಾರತಿಯ ।
ದ್ರಾಕ್ಷಿ ಖರ್ಜೂರ ಕದಳಿ ನಾರಿಕೇಳ ಫಲ ।
ಸಮರ್ಪಣೆಯ ಮಾಡಿದರು ಹರಿಗಾಗ ।। ೫೬ ।।

ಗಂಧ ಕುಂಕುಮ ಕುಸುಮ ಅರಿಷಿಣವು ।
ಬಂದ ಮುತ್ತೈದೆಯರಿಗೆ ಉಡಿಯ ತುಂಬುತಲಿ ।
ಆನಂದದಿಂದ ಅಕ್ಕ ತಂಗಿಯರು ।। ೫೭ ।।

ಖೀರು ಮಂಡಿಗೆ ಫೇಣಿ ಕ್ಷೀರ ಘೃತ ಸಕ್ಕರೆಯು ।
ಸಾರು ಶಾಲ್ಯನ್ನ ಶಾಕ ಪಾಕಗಳಿಂದ ।
ಊರ ಜನರ ಉಣಿಸಿದರು ।। ೫೮ ।।

ದಕ್ಷಿಣೆ ತಾಂಬೂಲ ತಕ್ಕೊಂಡು ಕೊಂಡಾಡುತಲಿ ।
ಲಕ್ಷಾಧಿಕಾರಿ ನೀನಾಗೆಂದು ಜನರೆಲ್ಲ ।
ಮಂತ್ರಾಕ್ಷತೆಯ ಹಾಕಿ ಹರಸಿದರು ।। ೫೯ ।।

ಬಣ್ಣ ಚಾವಡಿ ಚಿತ್ರ ಚಿನ್ನದ ಚೌಕಟ್ಟು ।
ಕನ್ನಡಿ ಮಹಾಲು ಕನಕ ಕಂಬದ ಮನೆಯು ।
ತಮ್ಮವರ ಕೂಡಿ ಹೊಕ್ಕನರಮನೆಯ ।। ೬೦ ।।

ಎಂಟು ಮಕ್ಕಳಿಗೆ ತನ್ನೆಂಟರಿಷ್ಟರಕೂಡಿ ।
ಕಂಠಾಭರಣ ಕಟ್ಟಿಸಿದ ಮಾಂಗಲ್ಯವನು ।
ಸಂತೋಷದಿ ಮಾಡಿದರು ಮದುವೆಯನು ।। ೬೧ ।।

ಮೊದಲು ಶ್ರಾವಣ ಮಾಸ ಬುಧವಾರ ದಿನದಲಿ ।
ಬುಧ-ಬೃಹಸ್ಪತಿಯ ಕಥೆಯ ಪೇಳುವೆ
ನಾನು । ಮುದದಿಂದ ಕೇಳಿ ಜನರೆಲ್ಲ ।। ೬೨ ।।

ನೇಮದಿಂದಲಿ ಈ ಕಥೆಯ ಹೇಳಿ ಕೇಳಿದ ಜನರ ।
ಭೀಮೇಶಕೃಷ್ಣನುದ್ಧಾರ ಮಾಡಿ ।
ಕಾಮಿತ ಫಲ ಕೊಡುವನು ।। ೬೩ ।।